<u>ಸಾಕ್ಷಿಗೆ ದಿನಾಂಕ *06-12-2024* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀಸವಾಲು : *4* ರಿಂದ *8* ನೇ ಪ್ರತಿವಾದಿಯರ ಪರ ಶ್ರೀ ವಿ ಬಿ ಡಿ. ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನನ್ನ ತಂದೆಯ ಹೆಸರು ಚನ್ನಬಸಪ್ಪ ರುದ್ರಪ್ಪ ಗೋಕಾವಿ. ರುದ್ರಪ್ಪ ನನ್ನ ಅಜ್ಜ. ನಮ್ಮ ಮನೆತನದ ಮೂಲ ಪುರುಷ ನನ್ನ ಅಜ್ಜ ರುದ್ರಪ್ಪ. ರುದ್ರಪ್ಪ ರವರ ಹೆಂಡತಿಯ ಹೆಸರು ನೀಲಮ್ಮ. ರುದ್ರಪ್ಪರವರು ಈಗ 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಅವರು 1994 ರಲ್ಲಿ ತೀರಿಕೊಂಡಿರಬಹುದು. ನೀಲಮ್ಮ ರವರು ಈಗ 20 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಾನು ರುದ್ರಪ್ಪ ಮತ್ತು ನೀಲಮ್ಮ ರವರ ಶವ ಸಂಸ್ಕಾರಕ್ಕೆ ಹಾಜರಾಗಿದ್ದೆ ಮತ್ತು ಅವರ ಅಂತಿಮ ಕ್ರಿಯೆ ಅಮೀನಗಡದಲ್ಲಿ ಆಗಿರುತ್ತದೆ. ರುದ್ರಪ್ಪ ರವರು ವ್ಯವಸಾಯ ಮಾಡುತ್ತಿದ್ದರು. ನೀಲಮ್ಮ ರವರು ಗೃಹಿಣಿ ಆಗಿದ್ದರು. ರುದ್ರಪ್ಪ ರವರಿಗೆ ವ್ಯವಸಾಯವನ್ನು ಬಿಟ್ಟು ಬೇರೆ ಯಾವುದೇ ಆದಾಯದ ಮೂಲ ಇರಲಿಲ್ಲ. ರುದ್ರಪ್ಪ ಮತ್ತು ನೀಲಮ್ಮ ರವರಿಗೆ ಒಟ್ಟು 4 ಜನ ಮಕ್ಕಳಿದ್ದು ಅವರಲ್ಲಿ 3 ಜನ ಗಂಡುಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು, ಅವರೆಂದರೆ,ಚನ್ನಬಸಪ್ಪ, ಈರಪ್ಪ, ಚನ್ನಪ್ಪ ಮತ್ತು ಶಂಕ್ರಮ್ಮ ಎಂದು ಇರುತ್ತಾರೆ. ಇವರಲ್ಲಿ ಚನ್ನಬಸಪ್ಪರವರು ಹಿರಿಯ ಮಗನಾಗಿದ್ದು ಅವರು 1987 ರಲ್ಲಿ ತೀರಿಕೊಂಡಿರುತ್ತಾರೆ. ಆಗ ಅವರಿಗೆ 52 ವರ್ಷ ವಯಸ್ಸಾಗಿತ್ತು. ಶಂಕ್ರಮ್ಮ ರವರು ಯಾವಾಗ ಹುಟ್ಟಿರುತ್ತಾರೆ ಮತ್ತು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಶಂಕ್ರಮ್ಮ ರವರು 1936 ರಲ್ಲಿ ಹುಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ.

ಚನ್ನಬಸಪ್ಪ ರವರು ಕರ ಕುಶಲ ಕೈಗಾರಿಕಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಬಸವ ಕಲ್ಯಾಣ, ಕೊಪ್ಪಳ ಮತ್ತು ಇಲಕಲ್ಲದಲ್ಲಿ ಕೆಲಸ ಮಾಡಿರುತ್ತಾರೆ. ಅವರು ಅಮೀನಗಡದಲ್ಲಿ ಕೆಲಸ ಮಾಡಿರುವುದಿಲ್ಲ. ನಮ್ಮ ತಂದೆಯವರು ಅಮೀನಗಡಕ್ಕೆ ಬರುವುದು ಹೋಗುವುದು ಮಾಡುತ್ತಿದ್ದರು. ಚನ್ನಬಸಪ್ಪರವರ ಹೆಂಡತಿಯ ಹೆಸರು ಬಸಮ್ಮ. ಅವರಿಗೆ 5 ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗ. ಅವರೆಂದರೆ ವಾದಿಯರು ಮತ್ತು 2 ಮತ್ತು 3 ನೇ ಪ್ರತಿವಾದಿಯರು. ನನ್ನ ಮದುವೆಯು 1980 ರಲ್ಲಿ ಅಮೀನಗಡದಲ್ಲಿ ಆಗಿರುತ್ತದೆ. 2 ನೇ ವಾದಿಯ ಮದುವೆಯು ರಾಜೇಶ್ವರದಲ್ಲಿ 1986 ರಲ್ಲಿ ಆಗಿರುತ್ತದೆ. 3 ನೇ ವಾದಿಯ ಮದುವೆಯು ಅಮೀನಗಡದಲ್ಲಿ ಆಗಿರುತ್ತದೆ. 4 ನೇ ವಾದಿಯ ಮದುವೆಯು ಅಮೀನಗಡದಲ್ಲಿ ಆಗಿರುತ್ತದೆ ಮತ್ತು ಅವರ

ಮದುವೆಯು ಯಾವಾಗ ಆಗಿರುತ್ತದೆ ಎಂದು ನೆನಪಿರುವುದಿಲ್ಲ. 3 ನೇ ಪ್ರತಿವಾದಿಯ ಮದುವೆಯು ಯಾವಾಗ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. 3 ಮತ್ತು 4 ನೇ ವಾದಿಯರು ಮತ್ತು 3 ನೇ ಪ್ರತಿವಾದಿಯ ಮದುವೆಯನ್ನು ನನ್ನ ದೊಡ್ಡಪ್ಪ ಈರಪ್ಪ ರವರು ಮಾಡಿರುತ್ತಾರೆ. ಆಗ ನನ್ನ ತಂದೆ ತೀರಿಕೊಂಡಿದ್ದರು. ನಾನು ಮತ್ತು ನನ್ನ ಸಹೋದರಿಯರು ಮದುವೆ ಮಾಡಿ ಕೊಟ್ಟ ನಂತರ ನಮ್ಮ ನಮ್ಮ ಗಂಡನ ಮನೆಗಳಲ್ಲಿ ಬಾಳ್ವೆ ಮಾಡುತ್ತಿದ್ದೇವೆ. ನನ್ನ ತಾಯಿ ಬಸಪ್ಪ ಅಮೀನಗಡದಲ್ಲಿ ವಾಸ ಮಾಡುತ್ತಿದ್ದಾರೆ. ಅವರು ಇಂದು ನ್ಯಾಯಾಲಯಕ್ಕೆ ನನ್ನ ಜೊತೆ ಬಂದಿರುತ್ತಾರೆ. ನಾನು ಅಮೀನಗಡಕ್ಕೆ ಬಂದಾಗ ನನ್ನ ತಾಯಿಯ ಮನೆಯಲ್ಲಿ ಇರುತ್ತೇನೆ. ನಮ್ಮ ಅಣ್ಣ ಈರಣ್ಣ ಬಿಜಾಪೂರದಲ್ಲಿ ಆದರ್ಶನಗರದಲ್ಲಿ ವಾಸ ಮಾಡುತ್ತಾರೆ. ನನ್ನಅಣ್ಣ ಕರ್ನಾಟಕ ಹ್ಯಾಂಡಲೂಮ ಕಾರ್ಪೋರೇಷನದಲ್ಲಿ ಕೆಲಸ ಮಾಡುತ್ತಿದ್ದು ಈಗ ವಿ ಆರ್ ಎಸ್ ತೆಗದುಕೊಂಡಿರುತ್ತಾರೆ. ಅವರು ಈಗ 12 ವರ್ಷಗಳ ಹಿಂದೆ ವಿ ಆರ್ ಎಸ್ ತೆಗೆದುಕೊಂಡಿರುತ್ತಾರೆ. ಅವರು ಬಿಜಾಪೂರದಲ್ಲಿ ಎಷ್ಟು ವರ್ಷಗಳಿಂದ ಇದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈರಪ್ಪ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈರಪ್ಪ ರವರ ಹೆಂಡತಿಯ ಹೆಸರು ಗಂಗವ್ವ ಮತ್ತು ಅವರಿಗೆ ಮಕ್ಕಳು ಇರುವುದಿಲ್ಲ. ಈರಪ್ಪ ರವರು ಶಿಕ್ಷಕರಿದ್ದರು. ಈರಪ್ಪ ರವರು 2011 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲಆದರೆ ಅವರ ತಿಥಿ ಕಾರ್ಯಕ್ರಮಕ್ಕೆ ಹಾಜರು ಆಗಿದ್ದೆ ಎಂದು ಹೇಳುತ್ತಾರೆ. ಅವರ ತಿಥಿ ಕಾರ್ಯಕ್ರಮವನ್ನು 6 ನೇ ಪ್ರತಿವಾದಿ ಮಾಡಿರುತ್ತಾರೆ. ಚನ್ನಪ್ಪ ರವರು 5 ರಿಂದ 6 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಾನು ಅವರು ತಿಥಿ ಕಾರ್ಯಕ್ರಮಕ್ಕೆ ಬಂದಿದ್ದೆ. ಚನ್ನಪ್ಪ ರವರು ಶಿಕ್ಷಕ ರಿದ್ದರು. ಅವರು ಹೆಂಡತಿಯ ಹೆಸರು ಬಂದವ್ವ ಮತ್ತು ಮಕ್ಕಳ ಹೆಸರು ವಿರುಪಾಕ್ಷಪ್ಪ, ಬಸವರಾಜ ಮತ್ತು ಮುಕ್ತಾಬಾಯಿ. ನಮ್ಮ ಮದುವೆ ಆದ ನಂತರ ಅಮೀನಗಡಕ್ಕೆ ಬರುತ್ತಾ ಇರುತ್ತೇನೆ. ಅಮೀನಗಡದಲ್ಲಿ ಏನಾಗುತ್ತಿತ್ತು ಎನ್ನುವ ವಿಷಯಗಳ ಬಗ್ಗೆ ನನಗೆ ಗೊತ್ತಾಗುತ್ತಿರಲಿಲ್ಲ. ಸಾಕ್ಷಿದಾರರು ಮುಂದುವರೆದು ನಾನು ನನ್ನ ಕೆಲಸಕ್ಕೆ ಬರುತ್ತಿದ್ದೆ ಮತ್ತು ಹೋಗುತ್ತಿದ್ದೆ ಎಂದು ಹೇಳುತ್ತಾರೆ. ನನ್ನ ಗಂಡನ ಮನೆ ಕೂಡ ಅಮಿನಗಡ ಇದ್ದು ಹೀಗಾಗಿ ನಾನು ತವರು ಮನೆಗೆ ಮತ್ತು ಗಂಡನ ಮನೆಗೆ ಬಂದು ಹೋಗಿ ಮಾಡುತ್ತಿದ್ದೆ. ನನ್ನ ತಾಯಿಗೆ ನನ್ನ ತಂದೆಯ ಪೆನ್ಸಿನ್ ಬರುತ್ತದೆ ಮತ್ತು ಅವರು ಒಬ್ಬರೇ ಅಮೀನಗಡದಲ್ಲಿ ವಾಸ ಮಾಡುತ್ತಾರೆ. ನನ್ನ ತಾಯಿಯವರು ಚಳ್ಳಿಗಿಡದ ರವರ ಪ್ಲಾಟ ನಂ. 48 ನ್ನು ಖರೀದಿ ಹಿಡಿದಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ಲಾಟನ್ನು ನನ್ನ ತಾಯಿಯವರು ಹಣದ

ಅಡಚಣೆಗೊಸ್ಕರ ನನ್ನ ದೊಡ್ಡಪ್ಪ ಈರಪ್ಪ ರವರಿಗೆ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಈರಪ್ಪ ತೀರಿಕೊಂಡ ನಂತರ ಸದರಿ ಪ್ಲಾಟ ವಾರಸಾ ಮುಖಾಂತರ ಅವರ ಹೆಂಡತಿ ಗಂಗವ್ವ ರವರ ಹೆಸರಿಗೆ ಬಂದಿದ್ದು, ಅವರು ಅದನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ಲಾಟ ನಂ.48 ನ್ನು ನನ್ನ ತಾಯಿ ಖರೀದಿ ಹಿಡಿದಿದ್ದು ಮತ್ತು ಅದನ್ನು ಹಣದ ಅಡಚಣೆಗೋಸ್ಕರ ಮಾರಾಟ ಮಾಡಿರುವ ಕುರಿತು ನನಗೆ ಗೊತ್ತಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಮೀನಗಡದ ಸರ್ವೆ ನಂ.317 ನ್ನು ಈರಪ್ಪ ರವರು ತಮ್ಮ ತಂದೆಯ ಹೆಸರಿನಲ್ಲಿ ಖರೀದಿ ಹಿಡಿದಿರುವ ಕುರಿತು ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನನ್ನು ಖರೀದಿ ಹಿಡಿಯಲು ನನ್ನ ತಂದೆ ಈರಪ್ಪ ರವರಿಗೆ ಹಣ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 1963 ರಲ್ಲಿ ಸರ್ವೆ ನಂ.317 ರುದ್ರಪ್ಪ ರವರ ಹೆಸರಿನಲ್ಲಿ ಖರೀದಿ ಆಗಿರುವ ವಿಷಯ ನನಗೆ ಗೊತ್ತಿರುವುದಿಲ್ಲ. 1994 ರಲ್ಲಿ ರುದ್ರಪ್ಪ ತೀರಿಕೊಂಡ ನಂತರ ಅವರ ಹೆಸರಿನಲ್ಲಿ ಇದ್ದ ಆಸ್ತಿಗಳನ್ನು ಅಪಸಾತ ವಾಟ್ನಿ ಮುಖಾಂತರ ಅವರ ಮಕ್ಕಳು ಹಂಚಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 317 ಕ್ಷೇತ್ರ 6 ಎಕರೆ ಇದನ್ನು ಈರಪ್ಪ ರವರು ಖರೀದಿ ಹಿಡಿದಿದ್ದರಿಂದ ಅಪಸಾತ ವಾಟ್ನಿ ಪತ್ರ ಆಗುವಾಗ ಅದನ್ನು ಈರಪ್ಪ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.317 ಇದು ಗುಡ್ಡದ ಕಲ್ಲಿನಿಂದ ಕೂಡಿರುವ ಬರಡು ಭೂಮಿ ಎಂದರ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿದಾರರು ಮುಂದುವರೆದು ನಾನು ಚಿಕ್ಕ ವಯಸ್ಸಿನಲ್ಲಿದ್ದಾಗ ನನ್ನ ಅಜ್ಜನ ಜೊತೆ ಸದರಿ ಜಮೀನಿಗೆ ಹೋಗುತ್ತಿದ್ದೆ ಎಂದು ಹೇಳುತ್ತಾರೆ. ಸದರಿ ಭೂಮಿಯಲ್ಲಿ ಏನು ಬೆಳೆಯುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮದುವೆ ಆದ ನಂತರ ಸದರಿ ಜಮೀನಿಗೆ ನಾನು ಹೋಗಿರುವುದಿಲ್ಲ. 1994 ರಲ್ಲಿ ನನ್ನ ಅಜ್ಜ ತೀರಿಕೊಂಡ ನಂತರ 1995 ರಲ್ಲಿ ಅಪಸಾತ ವಾಟ್ನಿ ಅವರ ಮಕ್ಕಳ ನಡುವೆ ಆದಾಗ ಮನೆ ನಂ. 479 ನ್ನು ಚನ್ನಪ್ಪ ರವರಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅಮೀನಗಡದಲ್ಲಿ ಇರುವ ಪ್ಲಾಟ ನಂ.11 ಎ ನ್ನು ನನ್ನ ಅಣ್ಣ ಈರಣ್ಣ ರವರಿಗೆ ಅಪಸಾತ ವಾಟ್ನಿಯಲ್ಲಿ ಕೊಟ್ಟಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈರಪ್ಪ ರವರು ಅಮೀನಗಡದ ಪ್ಲಾಟ ನಂ.11 ಮತ್ತು ಮನೆ ನಂ.14 ನ್ನು ತಮ್ಮ

ಹೆಸರಿಗೆ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ತುಳಸಿಗೇರಿಯಲ್ಲಿರುವ ಜಮೀನು ಸರ್ವೆ ನಂ. 213/ಸಿ ಕ್ಷೇತ್ರ 4 ಎಕರೆ ಇದನ್ನು ಈರಪ್ಪ ರವರು ತಮ್ಮ ಹೆಸರಿನಲ್ಲಿ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮತ್ತು ನನ್ನ ಸಹೋದರಿಯರ ಮದುವೆ ಆಗಿದ್ದರಿಂದ ಅಪಸಾತ ಪಾಲುವಾಟ್ನಿಯಲ್ಲಿ ನಮ್ಮ ಎಲ್ಲರ ಪಾಲುಗಳನ್ನು ನಮ್ಮ ಅಣ್ಣ ಈರಣ್ಣ ರವರಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಿಷಯವು ಅಮೀನಗಡದ ಎಲ್ಲ ಹಿರಿಯರಿಗೂ ತಿಳಿದಿತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅಪಸಾತ ಪಾಲು ವಾಟ್ನಿ ಪತ್ರಕ್ಕೆ ನನ್ನ ಗಂಡ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈ ಹಂತದಲ್ಲಿ 4 ರಿಂದ 8 ನೇ ಪ್ರತಿವಾದಿಯರ ಪರ ವಕೀಲರು ಸಾಕ್ಷಿದಾರರಿಗೆ ಅಪಸಾತ ಪಾಲುವಾಟ್ನಿ ಪತ್ರವನ್ನು ತೋರಿಸಿದ್ದು, ಸಾಕ್ಷಿದಾರರು ಅದನ್ನು ನೋಡಿ ಗುರುತಿಸಿರುವುದಿಲ್ಲ. ಆದ್ದರಿಂದ ಸದರಿ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ತುಳಸಿಗ್ರಾಮದ ಜಮೀನು ಸರ್ವೆ ನಂ. 213/ಸಿ ಇದನ್ನು ಈರಪ್ಪರವರು 1997 ರಲ್ಲಿ ಗೋವಿಂದಪ್ಪ ಒಂಟಗೋಡಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಜಮೀನನ್ನು ಮಾರಾಟ ಮಾಡಿದಾಗ 48 ಸಾವಿರ ರೂ.ಗಳು ಹಣ ಬಂದಿದ್ದು, ಅದರಿಂದ ಈರಪ್ಪ ರವರು ನನ್ನ ಅಣ್ಣನ ಹೆಸರಿನಲ್ಲಿ ಬಿಜಾಪೂರದಲ್ಲಿ ಪ್ಲಾಟ ಹಿಡಿದು ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಬಿಜಾಪೂರದಲ್ಲಿ ನನ್ನ ಅಣ್ಣ ಈರಣ್ಣ ರವರು ಸ್ವಂತ ಮನೆಯಲ್ಲಿ ಇರುತ್ತಾರೆ. ಸದರಿ ಮನೆಯು ನನ್ನ ಅಣ್ಣನಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈರಪ್ಪ ರವರು ಸರ್ವೆ ನಂ.213/ಸಿ ಇದನ್ನು ಮಾರಾಟ ಮಾಡಿ ಬಂದ ಹಣದಿಂದ ಪ್ಲಾಟನ್ನು ಖರೀದಿ ಮಾಡಿ ಅದರಲ್ಲಿ ನನ್ನ ಅಣ್ಣನಿಗೆ ಮನೆಯನ್ನು ಕಟ್ಟಿಸಿಕೊಟ್ಟಿದ್ದು ಮತ್ತು ಅದರ ನಂ. 91/1 ಬಿ/1 ಎ/1 ಎಕ್ಸ ಇರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈರಪ್ಪ ರವರು ತಮ್ಮ ಪಾಲಿಗೆ ಬಂದ ಮನೆ ನಂ.14 ನ್ನು ಈರಣ್ಣ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಮನೆ ನಂ.14 ಈಗ ನನ್ನ ಅಣ್ಣನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಮನೆಯಲ್ಲಿ ನನ್ನ ತಾಯಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. 2008 ರಲ್ಲಿ ಈರಪ್ಪ ರವರು ತಮ್ಮ

ಪಾಲಿಗೆ ಬಂದ ಸರ್ವೆ ನಂ.317 ರಲ್ಲಿ 3 ಎಕರೆ 4 ಗುಂಟೆ ಕ್ಷೇತ್ರವನ್ನು ಚನ್ನಪ್ಪ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ.ಈರಪ್ಪ ರವರು ತಮಗೆ ಉಳಿದಂತ ಸರ್ವೆ ನಂ. 317 ನ್ನು 3 ಎಕರೆ 4 ಗುಂಟೆ ಕ್ಷೇತ್ರವನ್ನು ತಮಗೆ ಮಕ್ಕಳು ಇಲ್ಲ ಎಂದು ಈರಪ್ಪ ಮತ್ತು ಗಂಗವ್ವ ರವರು ಮೃತ್ಯುಪತ್ರವನ್ನು ವಿರುಪಾಕ್ಷಪ್ಪರವರ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಿಷಯವು ನನಗೆ, ನನ್ನ ಅಣ್ಣನಿಗೆ ಮತ್ತು ಊರಿನ ಹಿರಿಯರಿಗೆ ಗೊತ್ತಿತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಪರವಾಗಿ ಈಗ ಹಿರೇಮಠ ವಕೀಲರು ವಕಾಲತನ್ನು ವಹಿಸಿರುತ್ತಾರೆ. ಸದರಿ ಮೃತ್ಯು ಪತ್ರಕ್ಕೆ ಕೆ ಎ ಹಿರೇಮಠ ವಕೀಲರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಅವರಿಗೂ ಕೂಡ ಮೃತ್ಯು ಪತ್ರದ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಗಂಗವ್ವ ರವರು ಕರೋನಾ ಸಮಯದಲ್ಲಿ ಅವರಿಗೆ ಅನಾರೋಗ್ಯ ಅಗಿದ್ದರಿಂದ ಹಣಕ್ಕಾಗಿ ಪ್ಲಾಟ ನಂ. 11 ನ್ನು 10 ಮತ್ತು 11 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ 9 ರಿಂದ 12 ನೇ ಪ್ರತಿವಾದಿಯರನ್ನು ಏಕೆ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.